**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA)**

**ಪ್ರಾಜೆಕ್ಟ್ 560ಯ**

**'ನೆರೆಹೊರೆಯ ಒಡನಾಟಗಳು'** ಇದರ ಅಡಿಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ

**ಕೊನೆಯ ದಿನಾಂಕ : ಶುಕ್ರವಾರ, 13 ಅಕ್ಟೋಬರ್ 2023**

ಆ ಸೋಮಾರಿಕಟ್ಟೆ । ನಿಮಗಾಗಿ ಉತ್ತರ ನಾಡಿಂದ ದೂದ್‌ಫೇಡಾ ತಂದ ವ್ಯಕ್ತಿ ।
।ಮರದ ಬುಡದ ದೆವ್ವದ ಮನೆ । ಎರಡು ಬಾರಿ ಮರುನಾಮಕರಣಗೊಂಡ ರಸ್ತೆ
ನಿಮ್ಮ ಅಜ್ಜಿಯ ಪ್ರೇಮ ಕಥೆ । ಮಾಯವಾದ ಕೆರೆ । ಖಾಲಿ ಬೀದಿಯಲ್ಲಿ ಮಾರಾಟಗಾರರ ಧ್ವನಿಗಳು । ಕಟ್ಟಲಾಗದೇ ಹೋದ ಮನೆಯ ನಕ್ಷೆ । ಮೂಲೆಯಲ್ಲಿರುವ ಆ ಪೆಟ್ಟಿಗೆ ಅಂಗಡಿ । ಕಥೆಗಳನ್ನು ಬರೆಯುವ ಗಾರ್ಡ್ । ಶನಿವಾರದ ಸಂತೆ । ಟ್ರಾಫಿಕ್‌ಜಂಜಾಟ ತಪ್ಪಿಸಲು ಚಿಕ್ಕಪ್ಪ ಕಂಡುಕೊಂಡ ದಾರಿ । ಮಾಯವಾದ ಕೊಳೆಗೇರಿ । ಊರ ಹಬ್ಬದ ತಮಟೆ ನಾದ । ಗಾಢ ನಿದ್ದೆಯಲ್ಲಿರುವ  ಸಮುದಾಯ ಗ್ರಂಥಾಲಯ । ಕ್ಯಾಬ್ ಚಾಲಕನ ಕನಸುಗಳು ...

ಪ್ರತಿ ನೆರೆಹೊರೆಗೂ ಹಲವು ಕಥೆಗಳಿವೆಯಲ್ಲವೇ?

ಮತ್ತೊಮ್ಮೆ ಆ ಕತೆಗಳಿಗೆ ಹಿಂದಿರುಗೋಣ... ಆ ಕತೆಗಳ ಮತ್ತಷ್ಟು ಮಗ್ಗಲುಗಳನ್ನು ಅನ್ವೇಷಿಸೋಣ... ಆ ಕತೆಗಳಿಂದ ಹುಟ್ಟುವ ಇನ್ನಷ್ಟು ಕತೆಗಳಿಗೆ ಕಾಯೋಣ...

**ಗತಕಾಲದ ಅನುಭವಗಳು । ವರ್ತಮಾನದ ಅನುಭವಗಳು । ಭವಿಷ್ಯಕ್ಕೆ ಒಂದಷ್ಟು ಕಲ್ಪನೆಗಳು**

ನೆರೆಹೊರೆಯ ಕಥೆಗಳು, ಜನಗಳು ಹಾಗೂ ಸ್ಥಳಗಳೊಂದಿಗೆ ಆಸಕ್ತಿಯುಳ್ಳ ಬೆಂಗಳೂರಿಗರಿಂದ ನಾವು ಅರ್ಜಿಗಳನ್ನು ನಿರೀಕ್ಷಿಸುತ್ತಿದ್ದೇವೆ. ಈ ಒಡನಾಟಗಳು ಕಥೆ ಹೇಳುವ ಚಟುವಟಿಕೆಗಳು, ಸಂಗೀತ, ಬೀದಿ ಪ್ರದರ್ಶನಗಳು, ತಾತ್ಕಾಲಿಕ ಅಥವಾ ಶಾಶ್ವತ ಇನಸ್ಟಲೇಷನ್‌ಗಳು... ಮುಂತಾದ ಕ್ರಿಯೆಗಳನ್ನು ಒಳಗೊಂಡಿರಬಹುದು.  ಈ ಮೂಲಕ ನಾವು ನಮ್ಮ ನೆರೆಹೊರೆಯವರ ಕುರಿತು ಮತ್ತಷ್ಟು ಹಾಗೂ ಮತ್ತೊಮ್ಮೆ ಚಿಂತಿಸಲು ಸಾಧ್ಯವಾಗಬಹುದು. ಇದರಿಂದ ಉತ್ಪನ್ನವಾಗುವ ಹೊಳಹುಗಳನ್ನು ಕಲೆ ಹಾಗೂ ಸಂಸ್ಕೃತಿಯ ಮೂಲಕ ಅಭಿವ್ಯಕ್ತಿಸೋಣ. ಒಟ್ಟಿಗೆ ಬದುಕುವ ಸಂತೋಷವನ್ನು ಹೆಚ್ಚಿಸಿಕೊಳ್ಳೋಣ. ಈ ಒಡನಾಟಗಳು ಸಾರ್ವಜನಿಕವಾಗಿರಬೇಕು ಮತ್ತು ಭೌತಿಕ ಸ್ವರೂಪದಲ್ಲಿರಬೇಕು, ಅಗತ್ಯವಿದ್ದಲ್ಲಿ ಮಾತ್ರ ವರ್ಚುಯಲ್ ಅಂಶಗಳನ್ನು ಒಳಗೊಳ್ಳಬೇಕು. **(ಪೂರ್ಣ ಪ್ರಮಾಣದ ವರ್ಚುವಲ್ ಪ್ರಸ್ತುತಿಗಳನ್ನು ನಾವು ಪ್ರೋತ್ಸಾಹಿಸುವುದಿಲ್ಲ.)**

ಪ್ರಸ್ತುತ ಸಂದರ್ಭದಲ್ಲಿ  ಉಂಟಾಗಿರುವ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಪರಿಸರ ಮತ್ತು ಸಂಬಂಧಗಳಲ್ಲಿನ ಪಲ್ಲಟಗಳನ್ನು, ಬದಲಾವಣೆಗಳನ್ನು ಪ್ರತಿಬಿಂಬಿಸುವ ಮತ್ತು/ ಅಥವಾ ಪ್ರತಿಕ್ರಿಯಿಸುವ ಪ್ರಸ್ತಾವನೆಗಳಿಗೆ ವಿಶೇಷ ಆದ್ಯತೆಯನ್ನು ನೀಡಲಾಗುವುದು.

ಉದ್ದೇಶಿತ ಪ್ರಸ್ತಾವನೆಗಳಿಗೆ ವಿಭಿನ್ನ ಹಿನ್ನೆಲೆಯ ಜನರು ಭಾಗೀದಾರರು ಮತ್ತು ಪ್ರೇಕ್ಷಕರು ಆಗುವುದನ್ನು ನಾವು ಪ್ರೋತ್ಸಾಹಿಸುತ್ತೇವೆ.

**ಯೋಜನೆಯ ಅವಧಿ:** ಎಲ್ಲಾ ಚಟುವಟಿಕೆಗಳು ನವೆಂಬರ್ 2023 ಮತ್ತು ಮಾರ್ಚ್ 2024 ರ ನಡುವೆ ನಡೆಯಬೇಕು

**ಬಜೆಟ್:** ನೀವು ಗರಿಷ್ಠ 35,000 ರೂ.ಗಳವರೆಗೆ ಕೋರಬಹುದು.

**ಕೊನೆಯ ದಿನಾಂಕ : ಶುಕ್ರವಾರ, 13 ಅಕ್ಟೋಬರ್ 2023**

**(ಈ ಕೊನೆಯ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ)**

**ಯಾರು ಅರ್ಜಿ ಸಲ್ಲಿಸಬಹುದು?**

ಬೆಂಗಳೂರಿನಲ್ಲಿ ವಾಸವಾಗಿರುವ ವ್ಯಕ್ತಿಗಳು.

**ಅರ್ಹತೆ:**

ನೀವು ಭಾರತೀಯ ಪ್ರಜೆಯಾಗಿದ್ದರೆ ಮಾತ್ರ ನೀವು ಅರ್ಜಿ ಸಲ್ಲಿಸಲು ಅರ್ಹರು. ನಿಮ್ಮ ಸಹಯೋಗಿಗಳು ಕೂಡ ಭಾರತೀಯ ಪ್ರಜೆಗಳಾಗಿರಬೇಕು. ವಿವರಗಳಿಗಾಗಿ, ದಯವಿಟ್ಟು ಇಲ್ಲಿ ಕ್ಲಿಕ್ ಮಾಡಿ.

**ನೀವು ಹೇಗೆ ಅರ್ಜಿ ಸಲ್ಲಿಸಬಹುದು?**

ಇದರೊಂದಿಗೆ ನಮಗೆ ಪ್ರಸ್ತಾವನೆಯನ್ನು ಕಳುಹಿಸಿ:

1. ನಿಮ್ಮ ನೆರೆಹೊರೆಯ ವಿವರಣೆ – ಅಲ್ಲಿ ವಾಸಿಸುವ ವಿವಿಧ ರೀತಿಯ ಜನರು, ಅದರ ಇತಿಹಾಸ, ವಾಣಿಜ್ಯ ಪ್ರದೇಶಗಳು, ಮನೆಗಳ ಮಾದರಿಗಳು, ಸಮುದಾಯ ಕೇಂದ್ರಗಳು, ಸಾಂಸ್ಕೃತಿಕ ಪರಂಪರೆಗಳು – ನಗರದಲ್ಲಿ ನಿಮ್ಮ ನೆರೆಹೊರೆಗೆ ಅದರ ವಿಶೇಷ ಗುರುತನ್ನು ನೀಡುವ ಯಾವುದಾದರೂ.

2. ನೀವು ಹಮ್ಮಿಕೊಳ್ಳಬೇಕೆಂದಿರುವ ಚಟುವಟಿಕೆಗಳ ಕುರಿತು ಬರೆಯಿರಿ. ಆ ಚಟುವಟಿಕೆಗಳನ್ನು ಯಾರು ನಿರ್ವಹಿಸುತ್ತಾರೆ ಹಾಗೂ ಪಾಲ್ಗೊಳ್ಳುವವರು ಯಾರು ಎಂಬುದು ಸ್ಪಷ್ಟವಿರಲಿ.

**ನಿಮ್ಮ ಪ್ರಸ್ತಾವನೆಗಳನ್ನು ಇಂಗ್ಲೀಷನ್ನೂ ಒಳಗೊಂಡಂತೆ ಭಾರತದ ಯಾವುದೇ ಭಾಷೆಯಲ್ಲಿ ಬೇಕಾದರೂ ಬರೆಯಬಹುದು.**

**ಅಪೂರ್ಣ ಪ್ರಸ್ತಾವನೆಗಳು ಮತ್ತು ಅರ್ಹತಾ ಮಾನದಂಡಗಳ ವ್ಯಾಪ್ತಿಗೆ ಬರದಿರುವ ಅರ್ಜಿದಾರರನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.**

ನಿಮ್ಮ ಪ್ರಸ್ತಾವನೆಗಳನ್ನು ನಮಗೆ ಕಳುಹಿಸುವ ಮೊದಲು ನೀವು ಯೋಜನಾ ವಿಚಾರಗಳನ್ನು ನಮ್ಮೊಂದಿಗೆ ಚರ್ಚಿಸಲು ಬಯಸಿದರೆ ನೀವು ನಮಗೆ ಕರೆ ಮಾಡಬಹುದು ಅಥವಾ ನಮಗೆ ಬರೆಯಬಹುದು. ನಿಮ್ಮ ಅಂತಿಮ ಪ್ರಸ್ತಾವನೆಯನ್ನು, ಎಲ್ಲಾ ಮಾಹಿತಿಗಳೊಂದಿಗೆ, 25 ಎಂ.ಬಿ. ಮೀರದ ಒಂದೇ ಇಮೇಲ್‌ನಲ್ಲಿ ಆನ್‌ಲೈನ್‌ನಲ್ಲಿ **ಶುಕ್ರವಾರ, 13 ಅಕ್ಟೋಬರ್ 2023** ರ ಒಳಗಾಗಿ, sumana@indiaifa.org ಗೆ ಸಲ್ಲಿಸಬೇಕು

**ಆಯ್ಕೆ ಪ್ರಕ್ರಿಯೆ**

ಆಯ್ದ ಅರ್ಜಿದಾರರಿಗೆ ಅಕ್ಟೋಬರ್ 2023 ರ ಕೊನೆಯಲ್ಲಿ ತಿಳಿಸಲಾಗುವುದು ಮತ್ತು ಐಎಫ್‌ಎ ತಂಡದೊಂದಿಗೆ ವಿವರವಾದ ಚರ್ಚೆಗೆ ಅವರು ಲಭ್ಯವಿರಬೇಕು. ಯೋಜನೆಗಳ ಕುರಿತು ಐಎಫ್‌ಎ ನಿರ್ಧಾರವೇ ಅಂತಿಮವಾಗಿರುತ್ತದೆ.

**ಆಯ್ಕೆಯಾದ ಎಲ್ಲಾ ಯೋಜನೆಗಳನ್ನು ಐಎಫ್‌ಎ ಕಾರ್ಯಗತಗೊಳಿಸುತ್ತದೆ.**

**ಪ್ರಾಜೆಕ್ಟ್ 560 ಕುರಿತು**

ಯೋಜನೆ 560 ಇದು ಐಎಫ್‌ಎ ಸಂಸ್ಥೆಯು ಬೆಂಗಳೂರಿಗೆ ವಿಶೇಷವಾಗಿ ಹಮ್ಮಿಕೊಂಡದ್ದಾಗಿದೆ. ಬೆಂಗಳೂರಿನ ಪಿನ್‌ಕೋಡ್‌ನ ಮೊದಲ ಮೂರು ಸಂಖ್ಯೆಗಳನ್ನು ಬಳಸಿಕೊಂಡು ಈ ಯೋಜನೆಯನ್ನು ಹೆಸರಿಸಲಾಗಿದೆ. ಯೋಜನೆ 560 ಕಲಾವಿದರು, ಮೇಧಾವಿಗಳು, ಸಂಘ–ಸಂಸ್ಥೆಗಳು ನೆರೆಹೊರೆಯವರೊಂದಿಗೆ ಕ್ರಿಯಾತ್ಮಕವಾಗಿ ಒಡನಾಡುವಂತೆ ಬಯಸುತ್ತದೆ. ಇದರ ಗುರಿ ಜನರಿಗೆ ನಗರದ ವಿಭಿನ್ನ ಅನುಭವಗಳನ್ನು ವಿವಿಧ ಆಯಾಮಗಳಲ್ಲಿ ಅನ್ವೇಷಿಸುವಂತೆ ಮಾಡುವುದಾಗಿದೆ. ನಗರ ಜೀವನವನ್ನು ಸಂಬಂಧಗಳೊಂದಿಗೆ ಹೊಸ ಬಗೆಗಳಲ್ಲಿ ಉತ್ಸಾಹದಿಂದ ಕಲ್ಪಿಸಿಕೊಳ್ಳಲು ಸಾಧ್ಯ ಮಾಡುವುದಾಗಿದೆ.

**ನಮ್ಮ 560. ನಮ್ಮ ಯೋಜನೆ. ನಮ್ಮ ಪಿನ್‌ಕೋಡ್**

**ಐ ಎಫ್ ಆ ಮಕ್ಕಳನ್ನೂ ಒಳಗೊಂಡಂತೆ ಎಲ್ಲರಿಗೂ, ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.**

**ಪ್ರಾಜೆಕ್ಟ್ 560 ಪ್ರೋಗ್ರಾಂ 2022–23 ಅನ್ನು ಸೋನಿ ಪಿಕ್ಚರ್ಸ್ ಎಂಟರ್ಟೈನ್ಮೆಂಟ್ ಫಂಡ್ ಹಾಗೂ ಬಿ ಏನ್ ಪಿ ಪಾರಿಬಾ ಇಂಡಿಯಾ ಬೆಂಬಲಿಸುತ್ತದೆ.**